## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 70(45)
ಮಾನ್ಯ ಸದಸ್ಯರ ಹೆಸರು: ಶ್ರೀ ಎಂ.ಎಲ್. ಅನಿಲ್‌ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ಸಚಿವರು: ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಉತ್ತರಿಸಬೇಕಾದ ದಿನಾಂಕ: 18.08.2025

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದೆಹಲಿ ಸರ್ಕಾರವು ಜಾತಿ-ಮತ ಗಣನೆಗೆ ತೆಗೆದುಕೊಳ್ಳದೇ 1ರಿಂದ 12ನೇ ತರಗತಿಯವರೆಗಿನ ಎಲ್ಲಾ ಮಕ್ಕಳಿಗೆ ಸರ್ಕಾರಿ ಶಾಲೆಯಲ್ಲಿ ಉಚಿತ ವಿದ್ಯಾಭ್ಯಾಸದ ಅವಕಾಶವನ್ನು ಕಲ್ಪಿಸಿದ್ದು, ಸದರಿ ಯೋಜನೆಯನ್ನು ಕರ್ನಾಟಕದಲ್ಲಿ ಪರಿಚಯಿಸಿದಲ್ಲಿ ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದರ ಬಗ್ಗೆ ಸರ್ಕಾರ ಚಿಂತಿಸಿದೆಯೇ: | **ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ:-**<br><br>ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ 2009ರ ನಿಯಮಗಳಂತೆ 1 ರಿಂದ 8ನೇ ತರಗತಿವರೆಗೆ ಎಲ್ಲಾ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ಯಾವುದೇ ಜಾತಿ-ಮತ ಪರಿಗಣಿಸದೇ ಉಚಿತ ಹಾಗೂ ಗುಣಾತ್ಮಕ ಶಿಕ್ಷಣ ನೀಡಲಾಗುತ್ತಿದೆ.<br><br>ಸರ್ಕಾರಿ ಪ್ರೌಢಶಾಲೆಯಲ್ಲಿ 9 ರಿಂದ 10ನೇ ತರಗತಿಗಳಿಗೆ ದಾಖಲಾತಿ ಶುಲ್ಕ 10 ರೂ. ಮಾತ್ರ ಇರುತ್ತದೆ. ಉಳಿದಂತೆ ಇತರೆ ಅಭಿವೃದ್ಧಿ ಶುಲ್ಕ 210 ರೂ. ಮಾತ್ರ ಪಡೆಯಲಾಗುತ್ತಿದೆ.<br><br>**ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ:-**<br><br>ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ಉಚಿತ ಶಿಕ್ಷಣ ನೀಡುವ ವ್ಯವಸ್ಥೆ ಇರುವುದಿಲ್ಲ.<br>ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ 11 ಮತ್ತು 12ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಬೋಧನಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಕೇವಲ ರೂ.255/- ಗಳನ್ನು ಅರೆಸರ್ಕಾರಿ ಶುಲ್ಕವಾಗಿ ಪಡೆಯಲಾಗುತ್ತಿದೆ.<br><br>ದಾಖಲಾತಿಯ ಸಂದರ್ಭದಲ್ಲಿ ಪಡೆಯಲಾಗುವ ದಾಖಲಾತಿ & ಇತರೆ ಶುಲ್ಕಗಳ ವಿವರಗಳನ್ನು ಅನುಬಂಧ 1 ರಲ್ಲಿ ಒದಗಿಸಲಾಗಿದೆ. |

| | | |
|---|---|---|
| ಆ) | ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಮಕ್ಕಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದ್ದು, ಮಕ್ಕಳೆಲ್ಲಾ ಖಾಸಗಿ ಶಾಲೆಗೆ ಪ್ರವೇಶಾತಿಯನ್ನು ಪಡೆಯುತ್ತಿರುವುದರಿಂದ ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿಸಲು ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳಲಾಗಿದೆ: (ಸಂಪೂರ್ಣವಾದ ಮಾಹಿತಿಯನ್ನು ನೀಡುವುದು) | ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಲ್ಲಿ 6 ರಿಂದ 10ನೇ ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮದಲ್ಲಿ ಕೇಂದ್ರಿಯ ವಿದ್ಯಾಲಯ ಮಾದರಿಯಲ್ಲಿ ಆದರ್ಶ ವಿದ್ಯಾಲಯಗಳನ್ನು (ಮಾದರಿ ಶಾಲೆಗಳು) ಪ್ರಾರಂಭಿಸಲಾಗಿದೆ.<br>• ಶತಮಾನ ಪೂರೈಸಿದ ಶಾಲೆಗಳನ್ನು ಪಾರಂಪರಿಕ ಶಾಲೆಗಳೆಂದು ಗುರುತಿಸಿ ಶಾಲಾ ನವೀಕರಣಕ್ಕಾಗಿ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.<br>• ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1ನೇ ತರಗತಿಯಿಂದ ಪ್ರಸ್ತುತ ಇರುವ ಕನ್ನಡ /ಇತರೆ ಮಾಧ್ಯಮದ ಜೊತೆಗೆ ಒಟ್ಟು 8538 ಆಂಗ್ಲ (ದ್ವಿಭಾಷಾ) (Bilingual) ಮಾಧ್ಯಮದ ತರಗತಿಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ.<br>• ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ 2024-25ನೇ ಸಾಲಿನಲ್ಲಿ ಒಟ್ಟು 150 ಶಾಲೆಗಳು ಮತ್ತು 2025-26ನೇ ಸಾಲಿನಲ್ಲಿ ಒಟ್ಟು 7 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಉನ್ನತೀಕರಿಸಲಾಗಿದೆ.<br>• 2025-26ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದಲ್ಲಿನ ಒಟ್ಟು 147 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಿ ಆದೇಶಿಸಿದೆ.<br>• ಸರ್ಕಾರಿ ಶಾಲೆ/ ಕಾಲೇಜುಗಳಿಗೆ ಮಕ್ಕಳನ್ನು ಆಕರ್ಷಿಸಿ ದಾಖಲಾತಿ ಹೆಚ್ಚಿಸಲು ದಾಖಲಾತಿ ಆಂದೋಲನ, ಸೇತುಬಂಧ ಹಾಗೂ ಮಿಂಚಿನ ಸಂಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.<br>• ಶೈಕ್ಷಣಿಕ ಸ್ಥಿತಿಗತಿಗಳಿಗೆ ಅನುಗುಣವಾಗಿ ಕಲಿಕಾ ಶೈಲಿಯ ಬದಲಾವಣೆ, ಆಧುನಿಕ ಕಲಿಕಾ ವಿಧಾನಗಳ ಅಳವಡಿಕೆ, ಮೂಲ ಭೂತ |

ಸೌಕರ್ಯಗಳನ್ನು ಕಲ್ಪಿಸಲಾಗಿದೆ.

- 2025-26ನೇ ಸಾಲಿನ ಶೈಕ್ಷಣಿಕ ವರ್ಷದಿಂದ ಕರ್ನಾಟಕದಲ್ಲಿ ಪಾಠ ಆಧಾರಿತ ಮೌಲ್ಯಾಂಕನವನ್ನು (Lesson Based Assessment) ಅಳವಡಿಸುವ ಸಂಬಂಧ ರಾಜ್ಯ ಪಠ್ಯಕ್ರಮದ ಶಾಲೆಗಳ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಕಲಿಕೆಯನ್ನು ಸಾಧಿಸಲು ಹಾಗೂ ಪ್ರತಿ ಪಾಠದ ನಂತರ ಮಗುವಿನ ಕಲಿಕೆಯನ್ನು ದೃಢೀಕರಿಸಲು ಪಾಠ ಆಧಾರಿತ ಮೌಲ್ಯಾಂಕನ ಪ್ರಶ್ನೆ ಕೋಠಿಯನ್ನು ಸಿದ್ಧಪಡಿಸಿ DSERT Website ನಲ್ಲಿ ಅಳವಡಿಸಲಾಗಿದೆ. ಸದರಿ ಪ್ರಶ್ನೆ ಕೋಠಿಯನ್ನು ಕಲಿಕಾ ಪ್ರಕ್ರಿಯೆಯಿಂದ ಮೌಲ್ಯಾಂಕನ ಪ್ರಕ್ರಿಯೆಯವರೆಗೆ ಎಲ್ಲಾ ಹಂತದಲ್ಲೂ ನಿರಂತರವಾಗಿ ಬಳಸುವ ಸಂಬಂಧ ಹಾಗೂ ಅನುಷ್ಠಾನ, ಮೇಲ್ವಿಚಾರಣೆ ಹಾಗೂ ಅನುಪಾಲನೆ ಸಂಬಂಧ ಸುತ್ತೋಲೆ, You Tube Live, VC & webinar ಗಳ ಮೂಲಕ ಮಾರ್ಗದರ್ಶನ ನೀಡಲಾಗಿದೆ.
- 2025-26ನೇ ಸಾಲಿನಲ್ಲಿ Foundational Literacy and Numeracy (FLN) ಅನ್ನು ಇನ್ನೂ ಉತ್ತಮ ರೀತಿಯಲ್ಲಿ ಅನುಷ್ಠಾನ ಮಾಡುವ ಸಂಬಂಧ NCERT ಯಿಂದ ಆರಂಭಿಕ ಸಾಕ್ಷರತೆಗೆ 09 ಹಾಗೂ ಸಂಖ್ಯಾಜ್ಞಾನಕ್ಕೆ 08 ಕಲಿಕಾ ಫಲಗಳನ್ನು ಒಳಗೊಂಡಂತೆ, ಪರಿಷ್ಕೃತ 17 ಕಲಿಕಾ ಫಲಗಳನ್ನು ರೂಪಿಸಲಾಗಿದೆ.
- ಮಕ್ಕಳನ್ನು ಗುರುತಿಸಿ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಾಜ್ಯ, ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಹಂತದಲ್ಲಿ FLN ಕೋಶ ಸ್ಥಾಪಿಸಿ ಈ ಮೂಲಕ ಕಾರ್ಯಕ್ರಮಗಳನ್ನು ಅನುಪಾಲನೆ ಮಾಡಲಾಗುತ್ತಿದೆ.
- **ಓದು ಕರ್ನಾಟಕ:** 4 ಮತ್ತು 5 ನೇ ತರಗತಿ ವಿದ್ಯಾರ್ಥಿಗಳಲ್ಲಿ ಬುನಾದಿ ಅಕ್ಷರ ಮತ್ತು ಸಂಖ್ಯಾ ಜ್ಞಾನವನ್ನು ಉತ್ತಮಪಡಿಸುವ

ಉದ್ದೇಶದಿಂದ 2025-26 ನೇ ಸಾಲಿನಲ್ಲಿ **"ಓದು ಕರ್ನಾಟಕ"** ಕಾರ್ಯಕ್ರಮವನ್ನು ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ರಾಜ್ಯದ ಎಲ್ಲಾ ಸರ್ಕಾರಿ ಶಾಲೆಗಳ 4 ಮತ್ತು 5 ನೇ ತರಗತಿ ವಿದ್ಯಾರ್ಥಿಗಳು ಇದರ ಲಾಭವನ್ನು ಪಡೆಯಲಿದ್ದಾರೆ.

- **ಜ್ಞಾನಸೇತು:** 1 ರಿಂದ 12 ನೇ ತರಗತಿವರೆಗಿನ ಸರ್ಕಾರಿ ಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ಕಲಿಕೆಗಾಗಿ 'ಜ್ಞಾನಸೇತು' ಕಾರ್ಯಕ್ರಮವನ್ನು 2025-26ನೇ ಸಾಲಿನಲ್ಲಿ ಖಾನ್ ಅಕಾಡೆಮಿ ಸಹಯೋಗದೊಂದಿಗೆ ಅನುಷ್ಠಾನಿಸಲಾಗುತ್ತಿದೆ. ಗಣಿತ, ವಿಜ್ಞಾನ ಮತ್ತು ಇಂಗ್ಲೀಷ್ ವಿಷಯಗಳಿಗೆ ಸಂಬಂಧಿಸಿದ ಡಿಜಿಟಲ್ ಸಂಪನ್ಮೂಲಗಳನ್ನು 21726 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, 4871 ಸರ್ಕಾರಿ ಪ್ರೌಢ ಶಾಲೆಗಳ ಹಾಗೂ 1229 ಸರ್ಕಾರಿ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳಲಿದ್ದಾರೆ.
- **ದೀಕ್ಷಾ:** 2025-26 ನೇ ಸಾಲಿನಲ್ಲಿ ಡಯಟ್ ನೋಡಲ್ ಅಧಿಕಾರಿಗಳಿಗೆ 'ಕಂಟೆಂಟ್ ಕ್ಲೀನಿಂಗ್' ಕಾರ್ಯಾಗಾರವನ್ನು ಹಮ್ಮಿಕೊಂಡು ದೀಕ್ಷಾ ದಲ್ಲಿನ ಕಂಟೆಂಟ್‌ನ್ನು ಪರಿಶೀಲಿಸಿ, ಪ್ರಸಕ್ತ ಪಠ್ಯಾಧಾರಿತ ಕಂಟೆಂಟ್ ನ್ನು ಪಠ್ಯಪುಸ್ತಕದ QR Code ಗಳಿಗೆ ಮ್ಯಾಪಿಂಗ್ ಮಾಡಿಸಲಾಗುತ್ತದೆ.
- ಶಿಕ್ಷಕರಿಗೆ ತಂತ್ರಜ್ಞಾನ ಬಳಕೆ ಸಂಬಂಧ Induction & TALP ತರಬೇತಿ ನೀಡಲಾಗಿದ್ದು, ಶಿಕ್ಷಕರು ಅಂತರ್ಜಾಲವನ್ನು ಇಂದೀಕರಿಸುವ ಜ್ಞಾನ ಹೊಂದಿರುತ್ತಾರೆ.
- ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ (TALP)ವನ್ನು ರಾಜ್ಯದ ಸರ್ಕಾರಿ ಪ್ರೌಢ

ಶಾಲೆಗಳಲ್ಲಿ 2016-17ರಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಕಾರ್ಯಕ್ರಮದಡಿ 4687 ಸರ್ಕಾರಿ ಪ್ರೌಢಶಾಲೆಗಳಿಗೆ ಲ್ಯಾಪ್‌ಟಾಪ್ ಮತ್ತು 3463 ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರೊಜೆಕ್ಟರ್ ಒದಗಿಸಲಾಗಿದೆ. 3069 ಸರ್ಕಾರಿ ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್ ಒದಗಿಸಲಾಗಿದೆ. 2025-26ನೇ ಸಾಲಿನಲ್ಲಿ 218 ಶಾಲೆಗಳಿಗೆ ಕಂಪ್ಯೂಟರ್‌ಗಳನ್ನು ಸ್ಥಾಪಿಸುವ ಪ್ರಕ್ರಿಯೆ ಚಾಲನೆಯಲ್ಲಿದ್ದು, ಸದರಿ ಉಪಕರಣಗಳನ್ನು ಬಳಸಿಕೊಂಡು ಇ-ಸಂಪನ್ಮೂಲಗಳನ್ನು ಸೃಜಿಸಿ ತರಗತಿಗಳ ಬೋಧನಾ ಕಲಿಕಾ ಪ್ರಕ್ರಿಯೆ ಉತ್ತಮಪಡಿಸಲಾಗುತ್ತಿದೆ.

- ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ Digital Skill ಬಳಕೆ ಹಾಗೂ ಕಂಪ್ಯೂಟರ್ ಆಧಾರಿತ ಶಿಕ್ಷಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ತರಬೇತಿಯನ್ನು ನೀಡುವ ಮೂಲಕ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ.
- ಟ್ಯಾಲ್ಪ್ ಯೋಜನೆಯಡಿ ತಂತ್ರಜ್ಞಾನ ಬಳಕೆಯ ಬಗ್ಗೆ 38632 ಶಿಕ್ಷಕರಿಗೆ ಇಂಡಕ್ಷನ್ ತರಬೇತಿಯನ್ನು ಹಾಗೂ 9644 ಶಿಕ್ಷಕರಿಗೆ ರಿಫ್ರೆಷರ್ ತರಬೇತಿಯನ್ನು ನೀಡಲಾಗಿದೆ.
- 2024-25ನೇ ಸಾಲಿನಲ್ಲಿ ಸ್ವಯಂ ಸೇವಾ ಸಂಸ್ಥೆ Ekstep ಸಹಕಾರದೊಂದಿಗೆ Artificial Intelligence ಬಳಸಿಕೊಂಡು ರಾಜ್ಯದ 2593 ಶಾಲಾ ಕಾಲೇಜುಗಳಲ್ಲಿ 4 ರಿಂದ 12ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ **"ಕಲಿಕಾ ದೀಪ"** ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.
- 2024-25ನೇ ಸಾಲಿನಲ್ಲಿ ಆಯವ್ಯಯ ಘೋಷಿತ ಕಂಡಿಕೆ 96(ಡಿ) ಅಡಿ 250 ಸರ್ಕಾರಿ

ಪ್ರೌಢಶಾಲೆಗಳಲ್ಲಿ ವಿಜ್ಞಾನ ಪ್ರಯೋಗಾಲಯ ಸೌಲಭ್ಯವನ್ನು ಅನುಷ್ಠಾನಿಸಿ ಪ್ರಯೋಗಾಲಯ ನಿರ್ವಹಣೆ ಕುರಿತು ಪ್ರಯೋಗದರ್ಶಿ ಎಂಬ ಕೈಪಿಡಿಯನ್ನು ಸಿದ್ಧಪಡಿಸಿ ಸಂಬಂಧಿಸಿದ ಶಾಲೆಗಳ ವಿಜ್ಞಾನ ಶಿಕ್ಷಕರಿಗೆ ತರಬೇತಿ ನೀಡಲಾಗಿದೆ. ಈ ಮೂಲಕ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ಹಾಗೂ ತಾರ್ಕಿಕ ಚಿಂತನಾ ಕೌಶಲಗಳು ವೃದ್ಧಿಯಾಗಲಿವೆ.

- ಡಿ.ಎಸ್.ಇ.ಆರ್.ಟಿ ಕಛೇರಿಯ ಇ.ಟಿ.ಸಿ ವಿಭಾಗದಿಂದ 2016-17 ರಿಂದ 2024-25ನೇ ಸಾಲಿನವರೆಗೆ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ಎಂ.ಆರ್.ಪಿ ಹಾಗೂ DIET Faculties ಸೇರಿದಂತೆ ಒಟ್ಟು 48276 ಶಿಕ್ಷಕರುಗಳಿಗೆ Induction-1 ಮತ್ತು Refresher ತರಬೇತಿಗಳನ್ನು ನೀಡಿ ಶಿಕ್ಷಕರ ಗುಣಮಟ್ಟವನ್ನು ಉತ್ತಮಪಡಿಸಲಾಗಿರುತ್ತದೆ ಹಾಗೂ 2025-26ನೇ ಸಾಲಿನಲ್ಲಿ TGT ಶಿಕ್ಷಕರು, GPT ಶಿಕ್ಷಕರು, Grade-1 ಮುಖ್ಯ ಶಿಕ್ಷಕರು ಸೇರಿದಂತೆ ಒಟ್ಟು 20600 ಶಿಕ್ಷಕರುಗಳಿಗೆ Induction ಮತ್ತು Refresher ತರಬೇತಿಯನ್ನು ನೀಡಲು ಕ್ರಿಯಾಯೋಜನೆಯನ್ನು ಸಿದ್ಧಪಡಿಸಿಕೊಂಡಿದ್ದು, ಶಿಕ್ಷಕರಿಗೆ ತರಬೇತಿ ನೀಡಿ ಗುಣಮಟ್ಟದ ಶಿಕ್ಷಣ ನೀಡಲು ಕ್ರಮವಹಿಸಲಾಗುತ್ತಿದೆ.
- 2019-20ನೇ ಸಾಲಿನಿಂದ 2024-25ನೇ ಸಾಲಿನವರೆಗೆ ಒಟ್ಟು 4405 ಶಾಲೆಗಳಲ್ಲಿ ಆಂಗ್ಲ ದ್ವಿಭಾಷಾ ಮಾಧ್ಯಮ (Bilingual) ತರಗತಿಗಳನ್ನು ಪ್ರಾರಂಭಿಸಿದೆ. ಮುಂದುವರೆದು, 2025-26ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಪ್ರಾಥಮಿಕ ಶಾಲೆಗಳಲ್ಲಿ ಹಾಲಿ ನಡೆಯುತ್ತಿರುವ ಕನ್ನಡ/ಇತರೆ ಮಾಧ್ಯಮದ ಜೊತೆಗೆ ಹೊಸದಾಗಿ 4134 ಆಂಗ್ಲ ದ್ವಿಭಾಷಾ ಮಾಧ್ಯಮದ (Bilingual) ತರಗತಿಗಳನ್ನು ಪ್ರಾರಂಭಿಸಿದೆ.
- ಪ್ರತಿ ವರ್ಷ ಸದರಿ ಶಾಲೆಗಳಲ್ಲಿ ಬೋಧಿಸುತ್ತಿರುವ

ಶಿಕ್ಷಕರುಗಳಿಗೆ EMTIP (English Medium Teachers Induction Programme) 8 ದಿನಗಳ ತರಬೇತಿಯನ್ನು ನೀಡಲಾಗುತ್ತಿದೆ (Learning outcome based) 2024-25ನೇ ಸಾಲಿನಲ್ಲಿ 1 ರಿಂದ 6 ನೇ ತರಗತಿಗಳನ್ನು ಬೋಧಿಸುವ 8707 ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ. 2025-26ನೇ ಸಾಲಿನಲ್ಲಿ 10260 ಶಿಕ್ಷಕರಿಗೆ ತರಬೇತಿ ನೀಡಲು ಯೋಜಿಸಲಾಗಿದೆ.

- 2024-25ನೇ ಸಾಲಿನಲ್ಲಿ 6ನೇ ತರಗತಿಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಿದ ಶಾಲೆಯ ಶಿಕ್ಷಕರಿಗೆ ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರಂತೆ ಒಟ್ಟು 2002 ಶಿಕ್ಷಕರಿಗೆ ವಿಷಯವಾರು ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.
- 2025-26ನೇ ಸಾಲಿನಲ್ಲಿ 7ನೇ ತರಗತಿ ಬೋಧಿಸುವ ಶಿಕ್ಷಕರಿಗೆ ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರಂತೆ ಒಟ್ಟು 2002 ಶಿಕ್ಷಕರಿಗೆ ವಿಷಯವಾರು ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಈ ತರಬೇತಿಗಳು ಶಾಲಾ ಮಕ್ಕಳಿಗೆ ಗುಣಾತ್ಮಕ ಪ್ರಾಥಮಿಕ ಶಿಕ್ಷಣವನ್ನು ನೀಡುವಲ್ಲಿ ಹಾಗೂ ಗಣನೀಯವಾಗಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲು ಸಹಕಾರಿಯಾಗಿವೆ.
- 2025-26 ನೇ ಸಾಲಿನಲ್ಲಿ 28 ಜಿಲ್ಲೆಗಳ ಶಿಕ್ಷಕರಿಗೆ ಮರುಸಿಂಚನ (6 ರಿಂದ 10ನೇ ತರಗತಿಗೆ) ತರಬೇತಿ, ರಾಜ್ಯದ ಎಲ್ಲಾ ಜಿಲ್ಲೆಯ 3 ರಿಂದ 5 ತರಗತಿಗೆ ಗಣಿತ ಬೋಧಿಸುವ ಶಿಕ್ಷಕರಿಗೆ ಗಣಿತ ಗಣಕ ತರಬೇತಿ, ಗಣಿತ ಕಲಿಕಾ ಆಂದೋಲನಾ ತರಬೇತಿ, ಆದಿವಾಸಿ ವಸತಿ ಶಾಲೆಯ ಶಿಕ್ಷಕರಿಗೆ ತರಬೇತಿ, ನಲಿಕಲಿ ತರಬೇತಿ, ಪ್ರೌಢ ಶಾಲಾ ಶಿಕ್ಷಕರಿಗೆ ಗಣಿತ ಮತ್ತು ವಿಜ್ಞಾನ ತರಬೇತಿಯನ್ನು ಐಐಎಸ್‌ಸಿ, ಚಳ್ಳಕೆರೆಯಲ್ಲಿ

ನೀಡಲಾಗುವುದು. ಇವು ಶಿಕ್ಷಕರ ಮುಖಾಂತರ ವಿದ್ಯಾರ್ಥಿಗಳಿಗೆ ತಲುಪುತ್ತಿದೆ. ಇದು ಗುಣಮಟ್ಟದ ಶಿಕ್ಷಣ ಹೆಚ್ಚಳಕ್ಕೆ ಸಹಾಯ ಮಾಡುತ್ತಿದೆ

- 2023-24ನೇ ಶೈಕ್ಷಣಿಕ ಸಾಲಿನಲ್ಲಿ 'ಕಲಿಕಾ ಬಲವರ್ಧನೆ' ಕಾರ್ಯಕ್ರಮದಡಿ 1 ರಿಂದ 9 ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಚಟುವಟಿಕೆ ಪುಸ್ತಕ ಮತ್ತು ಶಿಕ್ಷಕರಿಗೆ ಚಟುವಟಿಕೆ ಕೋಶಗಳ ರಚನೆ ಮತ್ತು ಭಾಷಾಂತರ ಮಾಡಿ ಶಾಲೆಗಳಿಗೆ ಸರಬರಾಜು ಮಾಡಲಾಗಿದೆ ಹಾಗೂ ತರಗತಿ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲು ಮಾರ್ಗದರ್ಶನ ನೀಡಿದೆ.
- ಸಂಭ್ರಮ ಶನಿವಾರ (No Bag Day) ಕಾರ್ಯಕ್ರಮವನ್ನು ಬ್ಯಾಗ್ ಹೊರೆ ತಗ್ಗಿಸಲು ಹಾಗೂ ಸಹ ಪಠ್ಯ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ನಾಗರೀಕ ಪ್ರಜ್ಞೆಯನ್ನು ಮೂಡಿಸಲು ಮತ್ತು ವೃತ್ತಿ ಕೌಶಲವನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ರಾಜ್ಯದ ಎಲ್ಲಾ ಶಾಲೆಗಳಲ್ಲಿ 10 ದಿನಗಳ ಬ್ಯಾಗ್ ರಹಿತ ದಿನಗಳನ್ನು ಆಚರಿಸಲಾಗುತ್ತಿದೆ.

**ಪದವಿ ಪೂರ್ವ ಶಿಕ್ಷಣಕ್ಕೆ ಸಂಬಂಧಿಸಿದಂತೆ:-**

**ಸರ್ಕಾರಿ ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚಳಕ್ಕೆ ಸರ್ಕಾರ ಕೈಗೊಂಡ ಕ್ರಮಗಳು.**

1. ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ಸಂಯೋಜನೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ CET/NEET/JEE ಪರೀಕ್ಷೆಗೆ ಉಚಿತ Online ತರಬೇತಿ ನೀಡಲಾಗುತ್ತಿದೆ.
2. ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವ ಸಂಬಂಧ ಶುಲ್ಕ ವಿನಾಯಿತಿಯನ್ನು ನೀಡಲಾಗುತ್ತಿದೆ.
3. ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿನ

<table>
<tr><td></td><td></td><td>ವಿಜ್ಞಾನ ಪದವಿ ಪೂರ್ವ ಕಾಲೇಜುಗಳಲ್ಲಿ ದಾಖಲಾತಿ ಹೆಚ್ಚಿಸುವ ಹಾಗೂ ಗುಣಮಟ್ಟದ ಶಿಕ್ಷಣ ನೀಡುವ ಸಂಬಂಧ ಆದರ್ಶ ಪದವಿ ಪೂರ್ವ ಕಾಲೇಜುಗಳನ್ನಾಗಿ ಪರಿವರ್ತಿಸಲಾಗಿದೆ.<br>4. ಸರ್ಕಾರಿ ಕಾಲೇಜುಗಳಲ್ಲಿನ ವಿಜ್ಞಾನ ಪ್ರಯೋಗಾಲಯಗಳನ್ನು ಉನ್ನತೀಕರಿಸಲಾಗಿದೆ.<br>5. ಸರ್ಕಾರದ ವತಿಯಿಂದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಉಚಿತ ವಿದ್ಯುತ್ & ನೀರಿನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.<br>6. ಗುಣಮಟ್ಟದ ಶಿಕ್ಷಣವನ್ನು ನೀಡುವ ಸಂಬಂಧ ಉಪನ್ಯಾಸಕರಿಗೆ ತರಬೇತಿಯನ್ನು ನೀಡಲಾಗುತ್ತಿದೆ.<br>7. ಜ್ಞಾನಸೇತು ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ.</td></tr>
<tr><td>ಇ)</td><td>ಕಳೆದ 3 ವರ್ಷದಿಂದ ಇಲ್ಲಿಯವರೆಗೂ 1ರಿಂದ 10ನೇ ತರಗತಿವರೆಗೂ ಸರ್ಕಾರಿ ಶಾಲೆಗಳಿಗೆ ಪ್ರವೇಶಾತಿ ಪಡೆದಿರುವ ಹಾಗೂ ಖಾಸಗಿ ಶಾಲೆಗಳಿಗೆ ಪ್ರವೇಶಾತಿ ಪಡೆದಿರುವ ಮಕ್ಕಳ ಸಂಖ್ಯೆ ಎಷ್ಟು: (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು)</td><td>ಕಳೆದ ಮೂರು ವರ್ಷಗಳ ದಾಖಲಾತಿ ವಿವರ ಈ ಕೆಳಕಂಡಂತಿದೆ:-
<table>
<tr><th>ಶೈಕ್ಷಣಿಕ ವರ್ಷ</th><th>ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆ</th><th>ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆ</th><th>ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆ</th></tr>
<tr><td>2022-23</td><td>4546523</td><td>1249310</td><td>4526310</td></tr>
<tr><td>2023-24</td><td>4294461</td><td>1231933</td><td>4697709</td></tr>
<tr><td>2024-25</td><td>4074525</td><td>1186214</td><td>4836966</td></tr>
</table>
ವಿವರವನ್ನು ಅನುಬಂಧ 2 ರಿಂದ 4ರಲ್ಲಿ ಒದಗಿಸಲಾಗಿದೆ.</td></tr>
<tr><td>ಈ)</td><td>ಕಳೆದ 3 ವರ್ಷದಿಂದ ಇಲ್ಲಿಯವರೆಗೂ ಎಷ್ಟು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗಿದೆ ಹಾಗೂ ದತ್ತು ಪಡೆದಿರುವ ಶಾಲೆಗಳ ಸಂಖ್ಯೆ ಎಷ್ಟು? (ವರ್ಷವಾರು</td><td>ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ:-<br>ರಾಜ್ಯದಲ್ಲಿ ಯಾವುದೇ ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಮುಚ್ಚಿರುವುದಿಲ್ಲ. ಮಕ್ಕಳ ಶೂನ್ಯ ದಾಖಲಾತಿಯಿಂದಾಗಿ ತಾತ್ಕಾಲಿಕವಾಗಿ</td></tr>
</table>

| | | |
|---|---|---|
| | ಸಂಪೂರ್ಣವಾದ ಮಾಹಿತಿ ನೀಡುವುದು). | ಸ್ಥಗಿತಗೊಳಿಸಲಾಗಿರುತ್ತದೆ. ಪುನಃ ಮಕ್ಕಳ ದಾಖಲಾತಿಯಾದಲ್ಲಿ ಶಾಲೆಗಳನ್ನು ಪುನರಾರಂಭಿಸಲಾಗುವುದು.<br>**ಸರ್ಕಾರಿ ಪ್ರೌಢಶಾಲೆಗೆ ಸಂಬಂಧಿಸಿದಂತೆ:-**<br>2023-24ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆ ಹುಲಿಕಲ್ ತುರುವೇಕೆರೆ ತಾ. ತುಮಕೂರು ಜಿಲ್ಲೆ ಈ ಶಾಲೆಯನ್ನು ವಿದ್ಯಾರ್ಥಿಗಳ ದಾಖಲಾತಿ ಕೊರತೆಯಿಂದ ಮುಚ್ಚಿದೆ.<br>21841 ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ದತ್ತು ಪಡೆಯಲಾಗಿದೆ. ವಿವರವನ್ನು ಅನುಬಂಧ-5ರಲ್ಲಿ ಒದಗಿಸಲಾಗಿದೆ. |

**ಇಪಿ 93 ಪಿಎಂಎ 2025**

(ಎಸ್. ಮಧು ಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

## ಅನುಬಂಧ-1

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ ಎಲ್ ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ), ಇವರು ಮಂಡಿಸಿದ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:70(45)ಗೆ ಇಲಾಖಾ ಕರಡು ಪೂರಕ ಟಿಪ್ಪಣಿ.

1. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರಥಮ ಪಿಯುಸಿ ದಾಖಲಾತಿಗೆ ಕಲಾ/ವಾಣಿಜ್ಯ/ವಿಜ್ಞಾನ ಸಂಯೋಜನೆಗಳ ವಿದ್ಯಾರ್ಥಿಗಳ ಪ್ರವೇಶಕ್ಕೆ ನಿಗದಿಪಡಿಸಿರುವ ಶುಲ್ಕಗಳ ವಿವರ (ರೂ.ಗಳಲ್ಲಿ).

| ಕ್ರ.ಸಂ | ಶುಲ್ಕಗಳವಿವರ | ಸಾಮಾನ್ಯವರ್ಗ (GM) | | ಪ.ಜಾ/ಪ.ಪಂ/ಪ್ರವರ್ಗ-1 | | 2A,2B,3A,3B | |
|---|---|---|---|---|---|---|---|
| | | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯ |
| 1 | ಬೋಧನಾ ಶುಲ್ಕ | 670 | Nil | Nil | Nil | Nil | Nil |
| 2 | ಅರ್ಜಿ ಶುಲ್ಕ | 25 | 25 | 25 | 25 | 25 | 25 |
| 3 | ನೋಂದಣಿ ಶುಲ್ಕ | 35 | Nil | Nil | Nil | 35 | Nil |
| 4 | ದಾಖಲಾತಿ ಶುಲ್ಕ | 50 | Nil | Nil | Nil | 50 | Nil |
| 5 | ಕ್ರೀಡಾ ಶುಲ್ಕ | 84 | Nil | Nil | Nil | 84 | Nil |
| 6 | ಗ್ರಂಥಾಲಯ ಶುಲ್ಕ | 120 | Nil | Nil | Nil | 120 | Nil |
| 7 | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 67 | 67 | 67 | 67 | 67 | 67 |
| 8 | ಶಿಕ್ಷಕರಕಲ್ಯಾಣ ನಿಧಿ | 25 | Nil | Nil | Nil | 25 | Nil |
| 9 | ವಿದ್ಯಾರ್ಥಿಗಳಕ್ಷೇಮಾಭಿವೃದ್ಧಿ ನಿಧಿ | 25 | Nil | Nil | Nil | 25 | Nil |
| 10 | ತರಗತಿ ಪರೀಕ್ಷೆ ಶುಲ್ಕ | 168 | Nil | Nil | Nil | 168 | Nil |
| 11 | ವಿಶೇಷ ಕ್ರೀಡಾ ನಿಧಿ | 34 | Nil | Nil | Nil | 34 | Nil |
| 12 | ಶೌಚಾಲಯ ನಿರ್ವಹಣಾ ಶುಲ್ಕ | 24 | 24 | 24 | 24 | 24 | 24 |
| 13 | ವಿದ್ಯುಚ್ಛಕ್ತಿ, ನೀರಿನ ಶುಲ್ಕ | 24 | 24 | 24 | 24 | 24 | 24 |
| 14 | ಬಾವುಟ ಶುಲ್ಕ | 25 | 25 | 25 | 25 | 25 | 25 |
| 15 | ರೋವರ್ ಮತ್ತು ರೇಂಜರ್ | 50 | 50 | 50 | 50 | 50 | 50 |
| 16 | ಎನ್ ಎಸ್ ಎಸ್ | 5 | 5 | 5 | 5 | 5 | 5 |
| 17 | ಭಾರತೀಯ ಸೇವಾ ದಳ | 10 | 10 | 10 | 10 | 10 | 10 |
| 18 | ರೆಡ್ ಕ್ರಾಸ್ | 25 | 25 | 25 | 25 | 25 | 25 |
| | ಒಟ್ಟುರೂ. | 1466 | 255 | 255 | 255 | 796 | 255 |
| | ವಿಜ್ಞಾನವಿಭಾಗದವಿದ್ಯಾರ್ಥಿಗಳುಹೆಚ್ಚುವರಿಯಾಗಿಪಾವತಿಸಬೇಕಾದಶುಲ್ಕಗಳು. | | | | | | |
| 19 | ಪ್ರಯೋಗಾಲಯ ಶುಲ್ಕ | 336 | Nil | Nil | Nil | Nil | Nil |
| 20 | ಪ್ರಾಯೋಗಿಕ ಪರೀಕ್ಷೆ ಶುಲ್ಕ | 150 | Nil | Nil | Nil | 150 | Nil |
| | ಒಟ್ಟುರೂ. | 486 | Nil | Nil | Nil | 150 | Nil |
| | ಸಮಗ್ರ ಮೊತ್ತ. | 1952 | 255 | 255 | 255 | 946 | 255 |

ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿ ದಾಖಲಾತಿಗೆ ಕಲಾ/ವಾಣಿಜ್ಯ/ವಿಜ್ಞಾನ ಸಂಯೋಜನೆಗಳಿಗೆ ವಿದ್ಯಾರ್ಥಿಗಳಿಗೆ ನಿಗದಿಪಡಿಸಿರುವ ಶುಲ್ಕಗಳ ವಿವರ.

| | | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು | ಹುಡುಗರು | ಹುಡುಗಿಯರು |
|---|---|---|---|---|---|---|---|
| 1 | ಬೋಧನಾ ಶುಲ್ಕ | 670 | Nil | Nil | Nil | Nil | Nil |
| 2 | ಅರ್ಜಿ ಶುಲ್ಕ | Nil | Nil | Nil | Nil | Nil | Nil |
| 3 | ನೋಂದಣಿ ಶುಲ್ಕ | Nil | Nil | Nil | Nil | Nil | Nil |
| 4 | ದಾಖಲಾತಿ ಶುಲ್ಕ | Nil | Nil | Nil | Nil | Nil | Nil |
| 5 | ಕ್ರೀಡಾ ಶುಲ್ಕ | 84 | Nil | Nil | Nil | 84 | Nil |
| 6 | ಗ್ರಂಥಾಲಯ ಶುಲ್ಕ | 120 | Nil | Nil | Nil | 120 | Nil |
| 7 | ಸಾಂಸ್ಕೃತಿಕ ಚಟುವಟಿಕೆ ಶುಲ್ಕ | 67 | 67 | 67 | 67 | 67 | 67 |
| 8 | ಟಿ.ಸಿ | 25 | Nil | Nil | Nil | 25 | Nil |
| 9 | ವಿ.ಕ್ಷೇ.ನಿ | 25 | Nil | Nil | Nil | 25 | Nil |
| 10 | ತರಗತಿ ಪರೀಕ್ಷೆ ಶುಲ್ಕ | 168 | Nil | Nil | Nil | 168 | Nil |
| 11 | ವಿಶೇಷ ಕ್ರೀಡಾ ನಿಧಿ | 34 | Nil | Nil | Nil | 34 | Nil |
| 12 | ಕಾ. ನಿರ್ವಹಣಾ ಶುಲ್ಕ | 24 | 24 | 24 | 24 | 24 | 24 |
| 13 | ವಿದ್ಯುಚ್ಛಕ್ತಿ ನೀರಿನ ಶುಲ್ಕ | 24 | 24 | 24 | 24 | 24 | 24 |
| 14 | ಬಾವುಟ ಶುಲ್ಕ | 25 | 25 | 25 | 25 | 25 | 25 |
| 15 | ದ್ವಿತೀಯ ಪಿಯುಸಿ ಪರೀಕ್ಷೆ ಶುಲ್ಕ | 400 | Nil | Nil | Nil | Nil | Nil |
| 16 | ಅಂಕ ಪಟ್ಟಿ ಶುಲ್ಕ | 50 | 50 | 50 | 50 | 50 | 50 |
| 17 | ರೋವರ್ ಮತ್ತು ರೇಂಜರ್ | 50 | 50 | 50 | 50 | 50 | 50 |
| 18 | ಎನ್ ಎಸ್ ಎಸ್ | 5 | 5 | 5 | 5 | 5 | 5 |
| 19 | ಭಾರತೀಯ ಸೇವಾದಳ | 10 | 10 | 10 | 10 | 10 | 10 |
| 20 | ರೆಡ್ ಕ್ರಾಸ್ | 25 | 25 | 25 | 25 | 25 | 25 |
| | ಒಟ್ಟು ರೂ. | 1806 | 280 | 280 | 280 | 736 | 280 |
| | **ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಪಾವತಿಸಬೇಕಾದ ಶುಲ್ಕಗಳು.** | | | | | | |
| 19 | ಪ್ರಯೋಗಾಲಯ ಶುಲ್ಕ | 336 | Nil | Nil | Nil | Nil | Nil |
| 20 | ಪ್ರಾಯೋಗಿಕ ಪರೀಕ್ಷೆ ಶುಲ್ಕ | 330 | Nil | Nil | Nil | Nil | Nil |
| | ಒಟ್ಟು ರೂ. | 666 | Nil | Nil | Nil | Nil | Nil |
| | ಸಮಗ್ರ ಮೊತ್ತ. | 2472 | 280 | 280 | 280 | 736 | 280 |

- ಸರ್ಕಾರಿ ಪದವಿ ಪೂ... ಕಾಲೇಜುಗಳಲ್ಲಿನ ಪ್ರಥಮ ಪಿಯುಸಿ ದಾಖಲಾತಿ ವಿವರ.

| ವರ್ಷ | ಸರ್ಕಾರಿ |
|---|---|
| 2022-23 | 193434 |
| 2023-24 | 179442 |
| 2024-25 | 159647 |

ದಾಖಲಾತಿ ಕುಸಿತವಾಗಿದೆ.

ಅನುಬಂಧ -2

ಸರ್ಕಾರಿಶಾಲೆಗಳಕಳೆದ 03 ವರ್ಷಗಳದಾಖಲಾತಿ 1 ರಿಂದ 10ನೇ ತರಗತಿವರೆಗೆ

| Sl.No | District Name | Department of Education | | |
|---|---|---|---|---|
| | | 2022-23 | 2023-24 | 2024-25 |
| 1 | BAGALKOT | 212194 | 199562 | 188272 |
| 2 | BALLARI | 142129 | 135051 | 128265 |
| 3 | BELAGAVI | 204581 | 196248 | 187452 |
| 4 | BELAGAVI CHIKKODI | 265549 | 251742 | 239254 |
| 5 | BENGALURU RURAL | 61675 | 57695 | 54783 |
| 6 | BENGALURU U NORTH | 92773 | 91205 | 90107 |
| 7 | BENGALURU U SOUTH | 136345 | 135547 | 135383 |
| 8 | BIDAR | 124879 | 117816 | 110121 |
| 9 | CHAMARAJANAGARA | 63987 | 59191 | 55078 |
| 10 | CHIKKABALLAPURA | 77004 | 70432 | 64682 |
| 11 | CHIKKAMANGALURU | 66410 | 61523 | 57447 |
| 12 | CHITRADURGA | 129474 | 120418 | 113344 |
| 13 | DAKSHINA KANNADA | 102752 | 99634 | 96353 |
| 14 | DAVANAGERE | 106770 | 99144 | 93330 |
| 15 | DHARWAD | 147499 | 138586 | 131209 |
| 16 | GADAG | 107049 | 101440 | 96841 |
| 17 | HASSAN | 96742 | 86369 | 79217 |
| 18 | HAVERI | 158723 | 149786 | 143270 |
| 19 | KALBURGI | 260402 | 247057 | 234224 |
| 20 | KODAGU | 23459 | 21375 | 20094 |
| 21 | KOLAR | 90497 | 82770 | 76706 |
| 22 | KOPPAL | 203270 | 196349 | 188001 |
| 23 | MANDYA | 93978 | 83323 | 74972 |
| 24 | MYSURU | 165359 | 151398 | 139222 |
| 25 | RAICHUR | 269107 | 259710 | 250223 |
| 26 | RAMANAGARA | 61563 | 56115 | 51721 |
| 27 | SHIVAMOGGA | 124401 | 115474 | 108241 |
| 28 | TUMAKURU | 98064 | 89990 | 83771 |
| 29 | TUMAKURU MADHUGIRI | 73179 | 67654 | 63018 |
| 30 | UDUPI | 61008 | 60045 | 58399 |
| 31 | UTTARA KANNADA | 46946 | 45818 | 44641 |
| 32 | UTTARA KANNADA SIRSI | 73460 | 70376 | 68316 |
| 33 | VIJAYANAGARA | 158175 | 150873 | 142815 |
| 34 | VIJAYAPURA | 268087 | 254535 | 243839 |
| 35 | YADAGIRI | 179033 | 170210 | 161914 |
| | **Grand Total** | 4546523 | 4294461 | 4074525 |

ಅನುಬಂಧ - 3

ಅನುದಾನಿತ ಶಾಲೆಗಳ ಕಳೆದ 3 ವರ್ಷಗಳ ದಾಖಲಾತಿ : 1 ರಿಂದ 10 ನೇ ತರಗತಿವರೆಗೆ

| Sl.No | District Name | Aided | | |
|---|---|---|---|---|
| | | 2022-23 | 2023-24 | 2024-25 |
| 1 | BAGALKOT | 61103 | 60610 | 59154 |
| 2 | BALLARI | 21155 | 20532 | 19388 |
| 3 | BELAGAVI | 65381 | 65509 | 64793 |
| 4 | BELAGAVI CHIKKODI | 98953 | 98076 | 95717 |
| 5 | BENGALURU RURAL | 10612 | 10436 | 10022 |
| 6 | BENGALURU U NORTH | 45532 | 43467 | 41728 |
| 7 | BENGALURU U SOUTH | 61114 | 58403 | 56201 |
| 8 | BIDAR | 58883 | 55615 | 53569 |
| 9 | CHAMARAJANAGARA | 16444 | 16087 | 14974 |
| 10 | CHIKKABALLAPURA | 14867 | 14507 | 13979 |
| 11 | CHIKKAMANGALURU | 17456 | 17196 | 16649 |
| 12 | CHITRADURGA | 42393 | 42442 | 39635 |
| 13 | DAKSHINA KANNADA | 49550 | 48328 | 46599 |
| 14 | DAVANAGERE | 46585 | 45123 | 41907 |
| 15 | DHARWAD | 58521 | 58417 | 56845 |
| 16 | GADAG | 30860 | 30463 | 29850 |
| 17 | HASSAN | 23073 | 22424 | 20708 |
| 18 | HAVERI | 43671 | 43865 | 42827 |
| 19 | KALBURGI | 66264 | 64521 | 62833 |
| 20 | KODAGU | 8474 | 8045 | 7711 |
| 21 | KOLAR | 20246 | 18775 | 17388 |
| 22 | KOPPAL | 19239 | 19384 | 19246 |
| 23 | MANDYA | 25331 | 25073 | 23077 |
| 24 | MYSURU | 48147 | 47077 | 45254 |
| 25 | RAICHUR | 21915 | 21857 | 21388 |
| 26 | RAMANAGARA | 15595 | 15582 | 14153 |
| 27 | SHIVAMOGGA | 35653 | 35140 | 33742 |
| 28 | TUMAKURU | 38392 | 37859 | 35140 |
| 29 | TUMAKURU MADHUGIRI | 14680 | 14239 | 12665 |
| 30 | UDUPI | 22348 | 21373 | 20089 |
| 31 | UTTARA KANNADA | 17476 | 15645 | 15036 |
| 32 | UTTARA KANNADA SIRSI | 15225 | 15172 | 14839 |
| 33 | VIJAYANAGARA | 26772 | 26295 | 25282 |
| 34 | VIJAYAPURA | 74088 | 81766 | 81662 |
| 35 | YADAGIRI | 13312 | 12630 | 12164 |
| | **Grand Total** | 1249310 | 1231933 | 1186214 |

ಅನುಬಂಧ - 4

ಅನುದಾನ ರಹಿತ ಶಾಲೆಗಳ ಕಳೆದ 3 ವರ್ಷಗಳ ದಾಖಲಾತಿ : 1 ರಿಂದ 10 ನೇ ತರಗತಿವರೆಗೆ

| Sl.No | District Name | Unaided | | |
|---|---|---|---|---|
| | | 2022-23 | 2023-24 | 2024-25 |
| 1 | BAGALKOT | 104348 | 110234 | 116702 |
| 2 | BALLARI | 119478 | 121359 | 124076 |
| 3 | BELAGAVI | 112041 | 116972 | 122790 |
| 4 | BELAGAVI CHIKKODI | 138884 | 144597 | 150867 |
| 5 | BENGALURU RURAL | 86732 | 93205 | 97898 |
| 6 | BENGALURU U NORTH | 544654 | 555034 | 562466 |
| 7 | BENGALURU U SOUTH | 933327 | 976247 | 994752 |
| 8 | BIDAR | 148693 | 150371 | 151543 |
| 9 | CHAMARAJANAGARA | 35455 | 36539 | 37563 |
| 10 | CHIKKABALLAPURA | 75444 | 77659 | 79765 |
| 11 | CHIKKAMANGALURU | 50137 | 52852 | 54849 |
| 12 | CHITRADURGA | 73352 | 77121 | 81367 |
| 13 | DAKSHINA KANNADA | 166576 | 173157 | 179193 |
| 14 | DAVANAGERE | 104199 | 111454 | 116987 |
| 15 | DHARWAD | 127348 | 133419 | 139970 |
| 16 | GADAG | 45244 | 47761 | 49674 |
| 17 | HASSAN | 85970 | 91912 | 96593 |
| 18 | HAVERI | 62514 | 66938 | 70479 |
| 19 | KALBURGI | 210449 | 215116 | 217276 |
| 20 | KODAGU | 36010 | 36742 | 37276 |
| 21 | KOLAR | 103938 | 107063 | 110382 |
| 22 | KOPPAL | 64777 | 65893 | 68529 |
| 23 | MANDYA | 82014 | 86770 | 90178 |
| 24 | MYSURU | 199599 | 207087 | 211962 |
| 25 | RAICHUR | 111498 | 114343 | 118119 |
| 26 | RAMANAGARA | 55707 | 58321 | 60342 |
| 27 | SHIVAMOGGA | 90173 | 96882 | 101869 |
| 28 | TUMAKURU | 87029 | 91829 | 95991 |
| 29 | TUMAKURU MADHUGIRI | 35610 | 37640 | 39567 |
| 30 | UDUPI | 75895 | 78523 | 81125 |
| 31 | UTTARA KANNADA | 32428 | 35198 | 35725 |
| 32 | UTTARA KANNADA SIRSI | 17623 | 18588 | 19074 |
| 33 | VIJAYANAGARA | 68714 | 72080 | 75703 |
| 34 | VIJAYAPURA | 176028 | 175331 | 182332 |
| 35 | YADAGIRI | 64422 | 63472 | 63982 |
| | **Grand Total** | 4526310 | 4697709 | 4836966 |

ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಶೈಕ್ಷಣಿಕ ದತ್ತು ಯೋಜನೆಗೆ ಸಂಬಂಧಿಸಿದ ಮಾಹಿತಿ

| ಕ್ರಸಂ | ಜಿಲ್ಲೆಯ ಹೆಸರು | ಇಲಾಖೇತರ ಅಧಿಕಾರಿಗಳು ಶೈಕ್ಷಣಿಕ ದತ್ತು ಪಡೆದ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ | ಇಲಾಖೆ ಅಧಿಕಾರಿಗಳು ಶೈಕ್ಷಣಿಕ ದತ್ತು ಪಡೆದ ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ | ಇಲಾಖೇತರ ಅಧಿಕಾರಿಗಳು ಶೈಕ್ಷಣಿಕ ದತ್ತು ಪಡೆದ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ | ಇಲಾಖೆ ಅಧಿಕಾರಿಗಳು ಶೈಕ್ಷಣಿಕ ದತ್ತು ಪಡೆದ ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ | ಒಟ್ಟು ದತ್ತು ಪಡೆದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸಂಖ್ಯೆ |
|---|---|---|---|---|---|---|
| 1 | BAGALKOTE | 0 | 1239 | 0 | 190 | 1429 |
| 2 | BALLARI | 2 | 42 | 20 | 3 | 67 |
| 3 | BELAGAVI | 89 | 139 | 38 | 25 | 291 |
| 4 | BENGALURU NORTH | 66 | 27 | 46 | 3 | 142 |
| 5 | BENGALURU RURAL | 100 | 515 | 46 | 19 | 680 |
| 6 | BENGALURU SOUTH | 0 | 467 | 0 | 53 | 520 |
| 7 | BIDAR | 44 | 175 | 117 | 40 | 376 |
| 8 | CHAMARAJANAGAR | 38 | 4 | 76 | 8 | 126 |
| 9 | CHIKKABALLAPURA | 206 | 1216 | 24 | 87 | 1533 |
| 10 | CHIKKAMANGALORE | 113 | 29 | 41 | 21 | 204 |
| 11 | CHIKKODI | 79 | 30 | 60 | 11 | 180 |
| 12 | CHITRADURGA | 168 | 556 | 15 | 22 | 761 |
| 13 | DAKSHINA KANNADA | 0 | 0 | 74 | 15 | 89 |
| 14 | DAVANAGERE | 210 | 790 | 30 | 95 | 1125 |
| 15 | DHARWAD | 107 | 22 | 51 | 31 | 211 |
| 16 | GADAG | 126 | 27 | 18 | 13 | 184 |
| 17 | HASSAN | 128 | 33 | 88 | 23 | 272 |
| 18 | HAVERI | 58 | 35 | 14 | 26 | 133 |
| 19 | KALABURAGI | 78 | 1006 | 40 | 183 | 1307 |
| 20 | KODAGU | 379 | 4 | 47 | 1 | 431 |
| 21 | KOLAR | 148 | 22 | 125 | 0 | 295 |
| 22 | KOPPAL | 237 | 82 | 46 | 2 | 367 |
| 23 | MADHUGIRI | 0 | 284 | 6 | 48 | 338 |
| 24 | MANDYA | 610 | 1323 | 100 | 143 | 2176 |
| 25 | MYSURU | 15 | 624 | 145 | 87 | 871 |
| 26 | RAICHUR | 60 | 684 | 59 | 100 | 903 |
| 27 | RAMANAGARA | 127 | 35 | 71 | 9 | 242 |
| 28 | SHIVAMOGGA | 276 | 1589 | 35 | 129 | 2029 |
| 29 | SIRSI | 94 | 275 | 31 | 34 | 434 |
| 30 | TUMKUR | 163 | 85 | 78 | 44 | 370 |
| 31 | UDUPI | 20 | 22 | 93 | 13 | 148 |
| 32 | UTTARKANNADA | 0 | 923 | 0 | 49 | 972 |
| 33 | VIJAYAPURA | 0 | 1792 | 0 | 172 | 1964 |
| 34 | YADAGIRI | 110 | 239 | 60 | 44 | 453 |
| 35 | VIJAYNAGAR | 45 | 103 | 25 | 45 | 218 |
| ಒಟ್ಟು | | 3896 | 14438 | 1719 | 1788 | 21841 |

DIRECTOR (Primary Education)
O/o CPI, Bangaluru-01